ಕರ್ನಾಟಕ ಸರ್ಕಾರ

ಸಂಖ್ಯೆ: ಪಪೂಶಿಇ/ಸಿಬ್ಬಂದಿ-3/ಯುಯು/ಕಾಮಾನ/2014-15

ನಿರ್ದೇಶಕರ ಕಛೇರಿ,
ಪದವಿ ಪೂರ್ವ ಶಿಕ್ಷಣ ಇಲಾಖೆ,
18ನೇ ಅಡ್ಡರಸ್ತೆ, ಮಲ್ಲೇಶ್ವರಂ,
ಬೆಂಗಳೂರು-12,
ದಿನಾಂಕ 04-07-2016.

**ಸುತ್ತೋಲೆ**

ವಿಷಯ: ರಾಜ್ಯದ ಖಾಸಗಿ ಪದವಿ ಪೂರ್ವ ಕಾಲೇಜುಗಳ ಮಾನ್ಯತೆ ನವೀಕರಿಸುವ ಬಗ್ಗೆ.

ಉಲ್ಲೇಖ:1. ಈ ಕಛೇರಿಯ ಸಮ ಸಂಖ್ಯೆಯ ಪತ್ರ ದಿನಾಂಕ 15-02-2016.
2. ಸರ್ಕಾರದ ಸುತ್ತೋಲೆ ಪತ್ರ ಸಂಖ್ಯೆ: ಇಡಿ 89 ಟಿಪಿಯು 2014 ದಿನಾಂಕ 15-06-2016.

* * * *

ಕರ್ನಾಟಕ ಪದವಿ ಪೂರ್ವ ಶಿಕ್ಷಣ (ಶೈಕ್ಷಣಿಕ, ನೋಂದಣಿ, ಆಡಳಿತ ಮತ್ತು ಸಹಾಯಾನುದಾನ, ಇತರೆ) ನಿಯಮಗಳು, 2006 ಈ ನಿಯಮಗಳು ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 136 ಟಿಪಿಯು 1999 ದಿನಾಂಕ 09-10-2006 ರಂತೆ ದಿನಾಂಕ 07-07-2007ರ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಿಸುವ ಮೂಲಕ ಜಾರಿಗೆ ಬಂದಿರುತ್ತದೆ. ಈ ನಿಯಮಗಳು ಜಾರಿಗೆ ಬರುವ ಮೊದಲು ಖಾಸಗಿ ಪದವಿ ಪೂರ್ವ ಕಾಲೇಜುಗಳಿಗೆ ಮಾನ್ಯತೆಯನ್ನು ನೀಡುವ ಬಗ್ಗೆ ಸರ್ಕಾರವು ಸುತ್ತೋಲೆ ಸಂಖ್ಯೆ: ಇಡಿ 113 ವಿವಿಧ 2005 ದಿನಾಂಕ 02-11-2006 ರಲ್ಲಿ ಸೂಚನೆಗಳನ್ನು ನೀಡಿತ್ತು. 2006ರ ನಿಯಮಗಳು ಜಾರಿಗೆ ಬಂದ ನಂತರ ಸದರಿ ನಿಯಮಗಳನ್ವಯ ಕಾಲೇಜುಗಳು ಹೊಂದಿರುವ ಮೂಲಭೂತ ಸೌಕರ್ಯಗಳನ್ನು ಆಧರಿಸಿ, ಕಾಲೇಜುಗಳ ವರ್ಗೀಕರಣ ಪ್ರಕ್ರಿಯೆ ನಡೆಸಿ, ಕಾಲೇಜುಗಳಿಗೆ ಮಾನ್ಯತೆ ನೀಡುವ ಕುರಿತಂತೆ ಕೆಲವು ಗೊಂದಲ ಉಂಟಾದ ಹಿನ್ನೆಲೆಯಲ್ಲಿ ಈ ಬಗ್ಗೆ ಮಾರ್ಗದರ್ಶನ ನೀಡುವಂತೆ ಉಲ್ಲೇಖ(1) ರಂತೆ ಸರ್ಕಾರವನ್ನು ಕೋರಲಾಗಿ ಸರ್ಕಾರವು ಖಾಸಗಿ ಪದವಿ ಪೂರ್ವ ಕಾಲೇಜುಗಳ ಮಾನ್ಯತೆಯನ್ನು ನವೀಕರಿಸುವ ಕುರಿತಂತೆ ಉಲ್ಲೇಖ(2)ರ ಸುತ್ತೋಲೆ ಪತ್ರದನ್ವಯ ಈ ಕೆಳಕಂಡ ಮಾರ್ಗಸೂಚಿಗಳನ್ನು ನಿಗದಿಪಡಿಸಿರುತ್ತದೆ.

1. ದಿನಾಂಕ 07-07-2007ರ ಪೂರ್ವದಲ್ಲಿ (2006ರ ನಿಯಮಗಳು ಜಾರಿಗೆ ಬಂದ ದಿನಾಂಕ) ಪ್ರಾರಂಭವಾದ ಮತ್ತು 2006ರ ನಿಯಮಗಳು ಜಾರಿಗೆ ಬರುವ ಪೂರ್ವದಲ್ಲಿ ಜಾರಿಯಲ್ಲಿದ್ದ ಮಾನದಂಡಗಳನ್ವಯ ಅಗತ್ಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಪದವಿ ಪೂರ್ವ ಕಾಲೇಜುಗಳ ಮಾನ್ಯತೆಯನ್ನು ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 113 ವಿವಿಧ 2005 ದಿನಾಂಕ 02-11-2006 ರಂತೆ 05 ವರ್ಷ ಅಥವಾ 15 ವರ್ಷಗಳಿಗೆ ನವೀಕರಿಸತಕ್ಕದ್ದು.
2. ದಿನಾಂಕ 07-07-2007 ರಂದು ಮತ್ತು ನಂತರ ಪ್ರಾರಂಭಿಸಲಾದ ಮತ್ತು 2006ರ ನಿಯಮಗಳಲ್ಲಿ ನಿಗದಿಪಡಿಸಲಾದ ಮಾನದಂಡಗಳನ್ವಯ ಮೂಲಭೂತ ಸೌಕರ್ಯಗಳನ್ನು ಹೊಂದಿರುವ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಮಾನ್ಯತೆಯನ್ನು ನವೀಕರಿಸುವ ಬಗ್ಗೆ ಸರ್ಕಾರದ ಸುತ್ತೋಲೆ ಸಂಖ್ಯೆ: ಇಡಿ 113 ವಿವಿಧ 2005 ದಿನಾಂಕ 02-11-2006 ರಂತೆ ಕ್ರಮವಹಿಸತಕ್ಕದ್ದು.

3. ದಿನಾಂಕ 31-03-2017 ರೊಳಗೆ ನಿಗದಿತ ಮೂಲಭೂತ ಸೌಕರ್ಯಗಳನ್ನು ಹೊಂದುವುದಾಗಿ ಸಂಬಂಧಿಸಿದ ಸಂಸ್ಥೆಯಿಂದ ರೂ 200/-ರ ಇ-ಸ್ಟಾಂಪ್ ಪತ್ರದಲ್ಲಿ ಮುಚ್ಚಳಿಕೆ ಪತ್ರ ಬರೆಸಿಕೊಂಡು, ನಿಗದಿತ ಮೂಲಭೂತ ಸೌಕರ್ಯಗಳನ್ನು (ಪ್ರಾರಂಭಗೊಂಡ ದಿನಾಂಕಕ್ಕೆ ಅನ್ವಯಿಸುವಂತೆ) ಹೊಂದಿರದ ಎಲ್ಲಾ ಪದವಿ ಪೂರ್ವ ಕಾಲೇಜುಗಳ ಮಾನ್ಯತೆಯನ್ನು ಸಹ 2016-17ನೇ ಸಾಲಿನವರೆಗೆ ನವೀಕರಿಸತಕ್ಕದ್ದು. ಅದರಂತೆ ದಿನಾಂಕ 31-03-2017 ರೊಳಗೆ ಮೂಲಬೂತ ಸೌಕರ್ಯಗಳನ್ನು ಒದಗಿಸಿಕೊಳ್ಳಲು ವಿಫಲವಾದಲ್ಲಿ 2017-18ನೇ ಶೈಕ್ಷಣಿಕ ಸಾಲಿನಲ್ಲಿ ಪ್ರಥಮ ಪಿಯುಸಿ ತರಗತಿಯನ್ನು ಮುಚ್ಚತಕ್ಕದ್ದು.
4. ಮೇಲಿನ ಪ್ರಕ್ರಿಯೆಯನ್ನು ದಿನಾಂಕ 31-08-2016 ರೊಳಗೆ ಮುಕ್ತಾಯಗೊಳಿಸತಕ್ಕದ್ದು. ದಿನಾಂಕ 15-09-2016 ರೊಳಗೆ ಮೂಲಭೂತ ಸೌಕರ್ಯಗಳನ್ನು ಹೊಂದಿರದ (ಅಂಶ-3 ರಲ್ಲಿನ ಕಾಲೇಜುಗಳು) ವಿವರಗಳನ್ನೊಳಗೊಂಡ (ಕಾಲೇಜುಗಳ ಪಟ್ಟಿ ಜಿಲ್ಲಾವಾರು) ವರದಿಯನ್ನು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ಇವರು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಈ ಹಿನ್ನೆಲೆಯಲ್ಲಿ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಖಾಸಗಿ ಪದವಿ ಪೂರ್ವ ಕಾಲೇಜುಗಳ ಪ್ರಾಚಾರ್ಯರ ತುರ್ತು ಸಭೆ ಕರೆದು ಉಲ್ಲೇಖ (2)ರ ಸುತ್ತೋಲೆ ಕುರಿತು ಗಮನಕ್ಕೆ ತಂದು, ಈ ಪತ್ರಕ್ಕೆ ಲಗತ್ತಿಸಿರುವ ಚೆಕ್‌ಲಿಸ್ಟ್‌ನಲ್ಲಿರುವ ಅಂಶಗಳಿಗೆ ಮಾಹಿತಿ ಮತ್ತು ಪೂರಕ ದೃಢೀಕೃತ ದಾಖಲೆಗಳನ್ನು ಪಡೆದು ದಿನಾಂಕ 16-07-2016 ರೊಳಗಾಗಿ ಸದರಿ ಚೆಕ್‌ಲಿಸ್ಟ್‌ನ್ನು ದೃಢೀಕರಿಸಿ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಿದೆ. ಒಂದು ವೇಳೆ ನಿಗದಿತ ದಿನಾಂಕದೊಳಗೆ ಚೆಕ್‌ಲಿಸ್ಟ್‌ನ್ನು ಸಲ್ಲಿಸದಿದ್ದಲ್ಲಿ ಉಲ್ಲೇಖ(2) ರಲ್ಲಿ ತಿಳಿಸಿರುವಂತೆ ಸಂಬಂಧಿಸಿದ ಅಧಿಕಾರಿ/ನೌಕರರ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ಈ ಕುರಿತು ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರು ತಮ್ಮ ಜಿಲ್ಲಾ ವ್ಯಾಪ್ತಿಯಲ್ಲಿ ಜನಪ್ರಿಯ ಕನ್ನಡ ಮತ್ತು ಆಂಗ್ಲ ದೈನಿಕ ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ನೀಡಿ ಎಲ್ಲಾ ಶಿಕ್ಷಣ ಸಂಸ್ಥೆಗಳ ಗಮನಕ್ಕೆ ತರಲು ಕ್ರಮವಹಿಸತಕ್ಕದ್ದು. ನಿಗದಿತ ಚೆಕ್‌ಲಿಸ್ಟ್‌ನ್ನು ಇಲಾಖೆಯ ವೆಬ್‌ಸೈಟ್ www.pue.kar.nic.in ನಲ್ಲಿ word format ನಲ್ಲಿ ಅಪ್‌ಲೋಡ್ ಮಾಡಲಾಗಿದ್ದು, ಈ ಚೆಕ್‌ಲಿಸ್ಟ್‌ನ್ನೇ ಬಳಸಿ ಮಾಹಿತಿ ನೀಡಲು ಸೂಚಿಸಿದೆ.

ನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ.

ಗೆ,
ಪದವಿ ಪೂರ್ವ ಶಿಕ್ಷಣ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರುಗಳಿಗೆ – ಶೀಘ್ರ ಕ್ರಮಕ್ಕಾಗಿ.

ಪ್ರತಿಗಳು:-
1. ನಿರ್ದೇಶಕರು/ಜಂಟಿ ನಿರ್ದೇಶಕರು (ಮಾ ಮತ್ತು ಅ)/ಉಪ ನಿರ್ದೇಶಕರು (ಮಾ ಮತ್ತು ಅ)
2. ಎಲ್ಲಾ ಖಾಸಗಿ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲರು ಮತ್ತು ಆಡಳಿತ ಮಂಡಳಿಯ ಅಧ್ಯಕ್ಷರು/ಕಾರ್ಯದರ್ಶಿ (ಜಿಲ್ಲಾ ಉಪ ನಿರ್ದೇಶಕರ ಮುಖಾಂತರ)
3. ನಿರ್ದೇಶಾನಲಯದ ಸಂಬಂಧಪಟ್ಟ ಶಾಖೆಯ ಎಲ್ಲಾ ಅಧಿಕಾರಿ/ಸಿಬ್ಬಂದಿಯವರುಗಳಿಗೆ
4. ಕಛೇರಿ/ಹೆಚ್ಚುವರಿ ಪ್ರತಿಗಳು.

ಖಾಸಗಿ ಅನುದಾನಿತ ಮತ್ತು ಅನುದಾನರಹಿತ ಪದವಿ ಪೂರ್ವ ಕಾಲೇಜುಗಳ ಮಾನ್ಯತೆ ನವೀಕರಿಸುವ ಸಂಬಂಧ
ಸಂಸ್ಥೆ/ ಕಾಲೇಜಿನವರು ಸಲ್ಲಿಸಬೇಕಾಗಿರುವ ಮಾಹಿತಿ/ದಾಖಲೆಗಳ ನಮೂನೆ

ಕಾಲೇಜಿನ ಸಂಕೇತ ಸಂಖ್ಯೆ | | | | | |

| ಭಾಗ–A – ಸಂಸ್ಥೆ (TRUST/SOCIETY) ಬಗ್ಗೆ ವಿವರಗಳು | | | |
|---|---|---|---|
| 1 | ಸಂಸ್ಥೆಯ/ಟ್ರಸ್ಟ್‌ನ ಹೆಸರು ಮತ್ತು ವಿಳಾಸ<br>(NAME OF THE TRUST/SOCIETY) – | | |
| 2 | ಆಡಳಿತ ಮಂಡಳಿ, ಟ್ರಸ್ಟ್ ಅಥವಾ ಸೊಸೈಟಿ ಅಥವಾ ಸಹಕಾರ ಸಂಘ ಅಥವಾ ಕಂಪನಿಯೇ?<br>**(ಸ್ಪಷ್ಟವಾಗಿ ನಮೂದಿಸಬೇಕು)** | | |
| 3 | ಸಂಸ್ಥೆಯ/ಟ್ರಸ್ಟ್ ನೋಂದಣಿ ಸಂಖ್ಯೆ, ದಿನಾಂಕ ಮತ್ತು ನೋಂದಣಿ ಕಛೇರಿ ವಿಳಾಸ<br>**(ಪ್ರತಿ ಲಗತ್ತಿಸುವುದು)** | | |
| 4 | ಆಡಳಿತ ಮಂಡಳಿಯ ವಿಧ<br>(ಎಸ್.ಸಿ./ಎಸ್.ಟಿ./ಧಾ.ಅ./ಭಾ.ಅ./ಇತರೆ)<br>**(ಅಧಿಕೃತ ದಾಖಲೆ ಪತ್ರ ಲಗತ್ತಿಸುವುದು)** | | |
| 5 | 2011–12 ರಿಂದ 2016–17ನೇ ವರ್ಷದಲ್ಲಿನ; ಸಂಸ್ಥೆಯ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳ ವಿವರ (Management Committee) | 1. ಅಧ್ಯಕ್ಷರ ಹೆಸರು ಮತ್ತು ಸ್ಥಳ :<br>ದೂರವಾಣಿ ನಂ (ಪ್ರಸಕ್ತ)<br><br>2. ಕಾರ್ಯದರ್ಶಿಯ ಹೆಸರು ಮತ್ತು ಸ್ಥಳ :<br>ದೂರವಾಣಿ ನಂ<br><br>ಪದಾಧಿಕಾರಿಗಳ ಪಟ್ಟಿ ಲಗತ್ತಿಸುವುದು | |
| 6 | ವಾರ್ಷಿಕ ಮಹಾ ಸಭೆ, ಇತ್ತೀಚೆಗೆ ಯಾವ ದಿನಾಂಕದಂದು ನಡೆದಿರುತ್ತದೆ?<br>**(ಸಭೆಯ ಪ್ರತಿಯನ್ನು ಲಗತ್ತಿಸುವುದು)** | | |
| 7 | ಸಂಸ್ಥೆಯು, 2011–12 ರಿಂದ 2016–17ನೇ ಸಾಲಿನವರೆಗಿನ ಲೆಕ್ಕ ಪತ್ರಗಳನ್ನು ಆಡಿಟ್ ಮಾಡಿಸಿ ಸಂಬಂಧಪಟ್ಟ ಇಲಾಖೆಗೆ ಸಲ್ಲಿಸಿ ಸ್ವೀಕೃತಿ ಪಡೆಯಲಾಗಿದೆಯೇ? **(ಪ್ರತಿ ಲಗತ್ತಿಸುವುದು)** | | |
| 8 | ಸಂಸ್ಥೆಯ ನೋಂದಣಿ ನವೀಕರಿಸಿದ ದಿನಾಂಕ<br>**(ಪ್ರತಿ ಲಗತ್ತಿಸುವುದು)** | | |
| 9 | ಸಂಸ್ಥೆ/ಟ್ರಸ್ಟ್ ನಡೆಸುತ್ತಿರುವ ಇತರೆ ಪದವಿ ಪೂರ್ವ ಕಾಲೇಜುಗಳ ಹೆಸರು ಮತ್ತು ವಿಳಾಸ | <u>ಅನುದಾನಿತ ಕಾಲೇಜು</u><br>1.<br>2.<br>3.<br>4.<br>5.<br>6.<br>7. | <u>ಅನುದಾನ ರಹಿತ ಕಾಲೇಜು</u><br>1.<br>2.<br>3.<br>4.<br>5.<br>6.<br>7. |

| | | | | | |
|---|---|---|---|---|---|
| 10 | ಆಡಳಿತ ಮಂಡಳಿಯಲ್ಲಿ ವ್ಯಾಜ್ಯ ಇದೆಯೇ? ಇದ್ದಲ್ಲಿ, ಪುರಾವೆಗಳ ಸಹಿತ ವಿವರ ನೀಡುವುದು. ಇಲ್ಲದಿದ್ದಲ್ಲಿ, ಇಲ್ಲದಿರುವ ಬಗ್ಗೆ ಎಲ್ಲಾ ಸದಸ್ಯರ ಸಹಿಯೊಂದಿಗೆ ಪ್ರಮಾಣ ಪತ್ರ ನೀಡುವುದು. | | | | |
| **ಭಾಗ–B – ಕಾಲೇಜಿನ (College) ಬಗ್ಗೆ ವಿವರಗಳು** | | | | | |
| 11 | ಕಾಲೇಜಿನ ಹೆಸರು ಮತ್ತು ವಿಳಾಸ **(ಸ್ಪಷ್ಟವಾಗಿ ನಮೂದಿಸಬೇಕು)** | | | | |
| 12 | ಕಾಲೇಜು ಮಂಜೂರಾದ ಆದೇಶ ಸಂಖ್ಯೆ ಮತ್ತು ದಿನಾಂಕ (ಸರ್ಕಾರದ ಆದೇಶ ಸಂಖ್ಯೆ ನಮೂದಿಸಬೇಕು) **(ಪ್ರತಿ ಲಗತ್ತಿಸುವುದು)** | | | | |
| 13 | ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಇಲಾಖೆಯು ನೀಡಿರುವ ಪ್ರಥಮ ಶೈಕ್ಷಣಿಕ ಮಾನ್ಯತೆಯ ಆದೇಶ ಸಂಖ್ಯೆ ಮತ್ತು ದಿನಾಂಕ (ಇಲಾಖೆಯ ಆದೇಶ ಸಂಖ್ಯೆ ನಮೂದಿಸಬೇಕು) **(ಪ್ರತಿ ಲಗತ್ತಿಸುವುದು)** | | | | |
| 14 | ಅನುದಾನಿತ ಅಥವಾ ಶಾಶ್ವತ ಅನುದಾನ ರಹಿತ ಕಾಲೇಜೆ? | | | | |
| 15 | ಸ್ವತಂತ್ರ ಅಥವಾ ಸಂಯುಕ್ತ ಪದವಿ ಪೂರ್ವ ಕಾಲೇಜೇ? | | | | |
| 16 | ಬಾಲಕರ ಅಥವಾ ಬಾಲಕಿಯರ ಅಥವಾ ಸಹಶಿಕ್ಷಣ ಕಾಲೇಜೇ? | | | | |
| 17 | ಕರ್ನಾಟಕ ಶಿಕ್ಷಣ ಕಾಯ್ದೆ, 1983ರ ನಿಯಮ 42 ರಂತೆ Managing Committee ರಚಿಸಿರುವ ಬಗ್ಗೆ ದಾಖಲೆಗಳು | | | | |
| 18 | ಸ್ಥಿರನಿಧಿ (STABILITY FUND) ಠೇವಣಿ ಕಟ್ಟಿರುವ ವಿವರ (ಬಾಂಡ್‌ನ ದೃಢೀಕೃತ ಫೋಟೋಪ್ರತಿಯನ್ನು ಒದಗಿಸುವುದು) | ಬ್ಯಾಂಕ್‌ನ ಹೆಸರು ಮತ್ತು ವಿಳಾಸ | ತೊಡಗಿಸಿರುವ ಸ್ಥಿರನಿಧಿ ಮೊತ್ತ | ದಿನಾಂಕ | ಅವಧಿ ಮುಗಿಯುವ ದಿನಾಂಕ |
| | | | | | |
| | | | | | |
| 19 | 2007–08 ರಿಂದ 2016–17ನೇ ಶೈಕ್ಷಣಿಕ ಸಾಲುಗಳವರೆಗೆ ಮಾನ್ಯತೆ ನವೀಕರಣ ಶುಲ್ಕ ಪಾವತಿಸಿರುವ ಬಗ್ಗೆ ಚಲನ್‌ಗಳ ದೃಢೀಕೃತ ಪ್ರತಿಗಳು ಮತ್ತು 2011–12ರ ನಂತರ ಹಾಗೂ 2016–17 ರವರೆಗೆ ಮಾನ್ಯತೆ ನವೀಕರಿಸಬೇಕಾಗಿರುವ ಕಾಲೇಜಿನವರು ಮಾನ್ಯತೆ ನವೀಕರಣ ಶುಲ್ಕ ಪಾವತಿಸಿರುವ ಚಲನ್‌ಗಳ ಪ್ರತಿಗಳನ್ನು ಸಲ್ಲಿಸುವುದು | | ಚಲನ್ ಸಂಖ್ಯೆ | ದಿನಾಂಕ | ಮೊತ್ತ |
| | | | | | |

## ಭಾಗ-C – ಶೈಕ್ಷಣಿಕ ವಿವರ

| ಕ್ರ. | ವಿವರ | ಭಾಷಾ ವಿಷಯಗಳು | ಸಂಯೋಜನೆಗಳು | ಮಂಜೂರಾದ ಸೆಕ್ಷನ್‌ಗಳ ಸಂಖ್ಯೆ | ಷರ |
|---|---|---|---|---|---|
| 20 | ಕಾಲೇಜಿಗೆ, ಪ್ರಥಮವಾಗಿ ಮಂಜೂರಾಗಿರುವ ಭಾಷೆ/ ವಿಷಯಗಳು, ಸಂಯೋಜನೆಗಳು ಮತ್ತು ಸೆಕ್ಷನ್‌ಗಳು ಎಷ್ಟು? (ಪ್ರಥಮ ಶೈಕ್ಷಣಿಕ ಅನುಮತಿ ನೀಡಿರುವ ಆದೇಶದ ಪ್ರತಿ ಲಗತ್ತಿಸುವುದು) | | | | |

| ಕ್ರ. | ವಿವರ | ವರ್ಷ | ಭಾಷಾ ವಿಷಯಗಳು | ಸಂಯೋಜನೆಗಳು | ಸೆಕ್ಷನ್‌ಗಳ ಸಂಖ್ಯೆ (ಹೆಚ್ಚುವರಿ ಸೆಕ್ಷನ್ ಸೇರಿದಂತೆ) |
|---|---|---|---|---|---|
| 21 | ನಂತರದ ವರ್ಷಗಳಲ್ಲಿ ಭಾಷೆ/ವಿಷಯಗಳು, ಸಂಯೋಜನೆಗಳು ಮತ್ತು ಸೆಕ್ಷನ್‌ಗಳನ್ನು ಪ್ರಾರಂಭಿಸಲು ಪಪೂಶಿ ಇಲಾಖೆಯಿಂದ ಅನುಮತಿ ಪಡೆದುಕೊಂಡಿದ್ದಲ್ಲಿ ಮಾತ್ರ ವರ್ಷವಾರು ಮಾಹಿತಿಯನ್ನು ನೀಡುವುದು<br>**(ಅನುಮತಿ ನೀಡಿರುವ ಆದೇಶದ ಪ್ರತಿಗಳನ್ನು ವರ್ಷವಾರು ಕ್ರಮಬದ್ಧವಾಗಿ ಸಲ್ಲಿಸಬೇಕು)** | | | | |
| | | | | | |
| | | | | | |
| | | | | | |
| | | | | | |
| | | | | | |

| ಕ್ರ. | ವಿವರ | ಪ್ರಾರಂಭಿಸಲು ಅನುಮತಿಸಿದ ವರ್ಷ | ಪ್ರಾರಂಭಿಸದಿರುವ /ರದ್ದುಪಡಿಸಿರುವ ವರ್ಷ | ಭಾಷೆ/ವಿಷಯಗಳು | ಸಂಯೋಜನೆಗಳು |
|---|---|---|---|---|---|
| 22 | ಇಲಾಖೆ/ನಿರ್ದೇಶನಾಲಯದಿಂದ ಅನುಮತಿ ಪಡೆದು ಪ್ರಾರಂಭಿಸದಿರುವ/ರದ್ಧಾಗಿರುವ ಭಾಷೆ/ವಿಷಯ/ಸಂಯೋಜನೆಗಳ ಮಾಹಿತಿ (ರದ್ದುಪಡಿಸಿರುವುದಕ್ಕೆ ಸಂಬಂಧಿಸಿದ ಆದೇಶದ ಪ್ರತಿ ಲಗತ್ತಿಸುವುದು) | | | | |
| | | | | | |
| | | | | | |
| | | | | | |

| ಕ್ರ. | ವಿವರ | |
|---|---|---|
| 23 | ಅನುದಾನಿತ ಕಾಲೇಜಾಗಿದ್ದರೆ, ಅನುದಾನಕ್ಕೆ ಒಳಪಟ್ಟ ಆದೇಶ ಸಂಖ್ಯೆ ಮತ್ತು ದಿನಾಂಕ (ಪ್ರತಿ ಲಗತ್ತಿಸುವುದು) | |

| ಕ್ರ. | ವಿವರ | ಭಾಷೆಗಳು | ವಿಷಯಗಳು |
|---|---|---|---|
| 24 | ಅನುದಾನಕ್ಕೆ ಒಳಪಟ್ಟಿರುವ ಭಾಷೆ/ವಿಷಯಗಳು | | |
| | | | |
| | | | |
| | | | |
| | | | |

| ಕ್ರ. | ವಿವರ | |
|---|---|---|
| 25 | ಕಾಲೇಜು ಪ್ರಾರಂಭವಾದಾಗಿನಿಂದ ಪ್ರಸ್ತುತ ಶೈಕ್ಷಣಿಕ ಸಾಲಿನವರೆಗಿನ ಮಾನ್ಯತೆ ನವೀಕರಣ ಪತ್ರಗಳು **(ಕ್ರಮಬದ್ಧವಾಗಿ ವರ್ಷವಾರು ಸಲ್ಲಿಸಬೇಕು)** | |

## ಭಾಗ-D – ದಾಖಲಾತಿ ವಿವರ

26 **(i)** ಸಂಯೋಜನೆವಾರು (ಸೂಚನೆ :- ಪೂರ್ಣ ಮಾಹಿತಿಯನ್ನು ಪ್ರತ್ಯೇಕ ಪಟ್ಟಿಮಾಡಿ ನೀಡಬೇಕು)

| ವರ್ಷ | ಸಂಯೋಜನೆಗಳು (combination wise) | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ | ಒಟ್ಟು ವಿದ್ಯಾರ್ಥಿಗಳು |
|---|---|---|---|---|
| 2007–08 | | | | |
| 2008–09 | | | | |
| 2009–10 | | | | |
| 2010–11 | | | | |
| 2011–12 | | | | |
| 2012–13 | | | | |
| 2013–14 | | | | |
| 2014–15 | | | | |
| 2015–16 | | | | |

27 **(ii)** ವಿಷಯವಾರು (ಸೂಚನೆ :- ಪೂರ್ಣ ಮಾಹಿತಿಯನ್ನು ಪ್ರತ್ಯೇಕ ಪಟ್ಟಿಮಾಡಿ ನೀಡಬೇಕು)

| ವರ್ಷ | ವಿಷಯವಾರು (subject wise) | ಪ್ರಥಮ ಪಿಯುಸಿ | ದ್ವಿತೀಯ ಪಿಯುಸಿ | ಒಟ್ಟು ವಿದ್ಯಾರ್ಥಿಗಳು |
|---|---|---|---|---|
| 2007–08 | | | | |
| 2008–09 | | | | |
| 2009–10 | | | | |
| 2010–11 | | | | |
| 2011–12 | | | | |
| 2012–13 | | | | |
| 2013–14 | | | | |
| 2014–15 | | | | |
| 2015–16 | | | | |

28 ಮಾರ್ಚ್ 20148, ಮಾರ್ಚ್ 2015 ಮತ್ತು ಮಾರ್ಚ್ 2016ರ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳ ವಿವರ

(ವಿಷಯವಾರು ಮತ್ತು ಸಂಯೋಜನೆವಾರು ಪ್ರತ್ಯೇಕವಾಗಿ ನೀಡುವುದು)

| ವಿಭಾಗಗಳು | ಹಾಜರಾದ ವಿದ್ಯಾರ್ಥಿಗಳ ಸಂಖ್ಯೆ | ತೇರ್ಗಡೆಯಾದವರು | ಶೇಕಡಾವಾರು |
|---|---|---|---|
| ಕಲಾ | | | |
| ವಾಣಿಜ್ಯ | | | |
| ವಿಜ್ಞಾನ | | | |

ಷರ: –

ಕ್ರ.ಸಂ. 27 ರಿಂದ 29 ರವರೆಗಿನ ಮಾಹಿತಿಗಳಿಗೆ ಸಂಬಂಧಿಸಿದಂತೆ, 2007–08ನೇ ಸಾಲಿನಿಂದ ಪ್ರಾರಂಭಿಸಲ್ಪಟ್ಟ ಕಾಲೇಜುಗಳಾಗಿದ್ದಲ್ಲಿ 2007–08 ರಿಂದ 2015–16 ರವರೆಗೆ ಮಾಹಿತಿ ನೀಡುವುದು. ಹಾಗೂ 2011–12ನೇ ಸಾಲಿನಿಂದ ಶೈಕ್ಷಣಿಕ ಮಾನ್ಯತೆ ನವೀಕರಿಸಬೇಕಾಗಿರುವ ಕಾಲೇಜಿನವರು 2010–11 ರಿಂದ 2015–16ನೇ ಸಾಲಿನವರೆಗಿನ ಮಾಹಿತಿಗಳನ್ನು ನೀಡುವುದು.

## ಭಾಗ–E ಸಿಬ್ಬಂದಿಗಳ ವಿವರ

29 A) ಬೋಧಕವರ್ಗ (ಸೂಚನೆ :– ಪೂರ್ಣ ಮಾಹಿತಿಯನ್ನು ಪ್ರತ್ಯೇಕ ಪಟ್ಟಿಮಾಡಿ ನೀಡಬೇಕು)

| ಕ್ರಮ ಸಂಖ್ಯೆ | ಹೆಸರು | ಜನ್ಮ ದಿನಾಂಕ ಮತ್ತು ಜಾತಿ | ವಿದ್ಯಾರ್ಹತೆ ಮತ್ತು ಶೇಕಡಾವಾರು ಅಂಕಗಳು | ಬೋಧನಾ ವಿಷಯ | ಸೇವೆಗೆ ಸೇರಿದ ದಿನಾಂಕ | ಷರಾ |
|---|---|---|---|---|---|---|
| 1 | | | | | | |
| 2 | | | | | | |
| 3 | | | | | | |
| 4 | | | | | | |
| 5 | | | | | | |
| 6 | | | | | | |
| 7 | | | | | | |
| 8 | | | | | | |
| 9 | | | | | | |
| 10 | | | | | | |

30 B) ಬೋಧಕೇತರ ವರ್ಗ (ಸೂಚನೆ :– ಪೂರ್ಣ ಮಾಹಿತಿಯನ್ನು ಪ್ರತ್ಯೇಕ ಪಟ್ಟಿಮಾಡಿ ನೀಡಬೇಕು)

| ಕ್ರಮ ಸಂಖ್ಯೆ | ಹೆಸರು | ಜನ್ಮ ದಿನಾಂಕ ಮತ್ತು ಜಾತಿ | ವಿದ್ಯಾರ್ಹತೆ | ಪದನಾಮ | ಸೇವೆಗೆ ಸೇರಿದ ದಿನಾಂಕ | ಷರಾ |
|---|---|---|---|---|---|---|
| 1 | | | | | | |
| 2 | | | | | | |
| 3 | | | | | | |
| 4 | | | | | | |
| 5 | | | | | | |

| | | |
|---|---|---|
| 31 | ಕರ್ನಾಟಕ ಶೈಕ್ಷಣಿಕ ಸಂಸ್ಥೆಗಳು (ಖಾಸಗಿ ಅನುದಾನ ರಹಿತ ಪ್ರಾಥಮಿಕ, ಪ್ರೌಢ ಹಾಗೂ ಪದವಿ ಪೂರ್ವ ಶಿಕ್ಷಣ ಸಂಸ್ಥೆಗಳ ಸಿಬ್ಬಂದಿಗಳ ಕೆಲವು ಸೇವಾ ಷರತ್ತು ಮತ್ತು ನಿಬಂಧನೆಗಳು) ನಿಯಮಾವಳಿ 2005 ರಲ್ಲಿ ಸೂಚಿಸಿರುವಂತೆ ವಿದ್ಯಾರ್ಹತೆ, ಸೇವಾಷರತ್ತುಗಳು, ಸೇವಾವಹಿ, ಕ್ರಾಸ್ಡ್ ಚೆಕ್‌ಗಳ ಮೂಲಕ ಸಿಬ್ಬಂದಿಗೆ ವೇತನ ಪಾವತಿ, ಕನಿಷ್ಠ ವೇತನ ನೀಡುವಿಕೆ ಇತ್ಯಾದಿ ನಿಯಮಗಳನ್ನು ಪಾಲಿಸಿರುವ ಬಗ್ಗೆ ದಾಖಲೆಗಳು | |

## ಭಾಗ – F – ಕಟ್ಟಡ ವಿವರ

| | | |
|---|---|---|
| 32 | ಕಾಲೇಜಿನ ನಿವೇಶನ (ಸ್ವಂತ/ಲೀಸ್/ಬಾಡಿಗೆ) | |
| 33 | ಕಾಲೇಜಿನ ನಿವೇಶನದ ವಿಸ್ತೀರ್ಣ (ಅಳತೆಯನ್ನು ಚದರ ಅಡಿಯಲ್ಲಿ ನಮೂದಿಸುವುದು) | |
| 34 | ಕಾಲೇಜಿನ ಕಟ್ಟಡದ ವಿಸ್ತೀರ್ಣ (ಪ್ಲಿಂತ್ ಏರಿಯಾ) (ಅಳತೆಯನ್ನು ಚದರ ಅಡಿಯಲ್ಲಿ ನಮೂದಿಸುವುದು) | |
| 35 | ಆಡಳಿತ ಮಂಡಳಿಯು ಹೊಂದಿರುವ ಸಾಲ್ವೆನ್ಸಿ ಮೊತ್ತ ಎಷ್ಟು? (ದಾಖಲೆಗಳನ್ನು ಲಗತ್ತಿಸುವುದು) | ಸ್ಥಿರಾಸ್ತಿ :<br>ಚರಾಸ್ತಿ :<br>ಒಟ್ಟು : |

| The minimum requirements specified below, are meant for six sections and where language subjects in part-1 are only two. For every additional language subject in Part-1, one lecture hall and for every additional subject in Part-11, two lecture halls shall be provided. | | | | | |
|---|---|---|---|---|---|
| ಇಡಿ 136 ಟಿಪಿಯು 1999 ದಿನಾಂಕ 09-10-2006ರ ಅಧಿಸೂಚನೆ ಪ್ರಕಾರ ಇರಬೇಕಾದ ಮೂಲಭೂತ ಸೌಕರ್ಯಗಳು (ಚದರ ಅಡಿಯಲ್ಲಿ) | | | | ಹಾಲಿ ಲಭ್ಯವಿರುವ ಮೂಲಭೂತ ಸೌಕರ್ಯಗಳು (ನಿಖರವಾಗಿ ಅಳತೆಯನ್ನು ಚದರ ಅಡಿಯಲ್ಲಿ ತಿಳಿಸಬೇಕು) | |
| 36 | *ಕೊಠಡಿಗಳು* | *ಅಳತೆ* | *ಸಂಖ್ಯೆ* | *ಅಳತೆ* | *ಸಂಖ್ಯೆ* |
| 37 | ಉಪನ್ಯಾಸಕರ ಕೊಠಡಿಗಳು | 22' x 30' | 4 | | |
| 38 | ಪ್ರತ್ಯೇಕ ಭಾಷಾ ವಿಷಯಕ್ಕೆ ಕೊಠಡಿಗಳು | 22' x 30' | 2 | | |
| 39 | ಪ್ರಾಚಾರ್ಯರ ಕೊಠಡಿ | 250' ಚ.ಅ. | 1 | | |
| 40 | ಕಛೇರಿ ಕೊಠಡಿ | 250' ಚ.ಅ. | 1 | | |
| 41 | ಸಿಬ್ಬಂದಿ ಕೊಠಡಿ | 500' ಚ.ಅ. | 1 | | |
| 42 | ಶೌಚಾಲಯವನ್ನೊಳಗೊಂಡ ಮಹಿಳೆಯರ ನಿರೀಕ್ಷಣಾ ಕೊಠಡಿ. (ಏಕಕಾಲದಲ್ಲಿ 10 ವಿದ್ಯಾರ್ಥಿನಿಯರು ಶೌಚಾಲಯಗಳನ್ನು ಉಪಯೋಗಿಸುವಂತಿರಬೇಕು) | 500' ಚ.ಅ. | 1 | | |
| 43 | ಗ್ರಂಥಾಲಯ (LIBRARY) (ಕನಿಷ್ಠ 5000 ಗ್ರಂಥಗಳು) | 1000' ಚ.ಅ. | 1 | | |
| 44 | ವಾಚನಾಲಯ (READING ROOM) | 1000' ಚ.ಅ. | 1 | | |
| 45 | ಸೈಕಲ್ ನಿಲ್ದಾಣ (ಕನಿಷ್ಠ 100 ಬೈಸಿಕಲ್ ನಿಲ್ಲಲು ಅವಕಾಶವಿರಬೇಕು) | ಇರತಕ್ಕದ್ದು | | | |
| | | *ವಿಜ್ಞಾನ ವಿಭಾಗ* | | | |
| 46 | ಭೌತಶಾಸ್ತ್ರ/ಗಣಕವಿಜ್ಞಾನ/ಎಲೆಕ್ಟ್ರಾನಿಕ್ಸ್ ವಿಷಯಗಳಿಗೆ – ತಲಾ ಒಂದೊಂದು ಪ್ರಯೋಗಾಲಯ ಕೊಠಡಿಗಳು (ಪ್ರತಿಯೊಂದು ವಿಷಯ ಮತ್ತು ಸೆಕ್ಷನ್‌ಗೆ ಪ್ರತ್ಯೇಕ ಕೊಠಡಿ, ನೀರು ಮತ್ತು ಸ್ಯಾನಿಟರಿ ವ್ಯವಸ್ಥೆ ಇರಬೇಕು) | 24' x 60' | | | |
| 47 | ರಸಾಯನಶಾಸ್ತ್ರ/ಜೀವಶಾಸ್ತ್ರ ವಿಷಯಕ್ಕೆ – ತಲಾ ಒಂದೊಂದು ಪ್ರಯೋಗಾಲಯ ಕೊಠಡಿಗಳು (ಪ್ರತಿಯೊಂದು ವಿಷಯ ಮತ್ತು ಸೆಕ್ಷನ್‌ಗೆ ಪ್ರತ್ಯೇಕ ಕೊಠಡಿ, ನೀರು ಮತ್ತು ಸ್ಯಾನಿಟರಿ ವ್ಯವಸ್ಥೆ ಇರಬೇಕು) | 24' x 60' | | | |

| | | | |
|---|---|---|---|
| 48 | ವಿಜ್ಞಾನ ಉಪಕರಣಗಳು– ರಸಾಯನ ಶಾಸ್ತ್ರ/ಭೌತಶಾಸ್ತ್ರ, ಎಲೆಕ್ಟ್ರಾನಿಕ್ಸ್ ಮತ್ತು ಜೀವಶಾಸ್ತ್ರ ವಿಷಯಗಳಿಗೆ | ಇರತಕ್ಕದ್ದು (ಪಠ್ಯಕ್ರಮಕ್ಕನುಗುಣವಾಗಿ ನಿಗದಿಪಡಿಸಿರುವ ಉಪಕರಣಗಳು ಇರಬೇಕು) | |
| 49 | ವಿಜ್ಞಾನ ಉಪಕರಣಗಳು– ಗಣಕವಿಜ್ಞಾನ ವಿಷಯಕ್ಕೆ | ಗಣಕವಿಜ್ಞಾನ ವಿಭಾಗಕ್ಕೆ ಸಂಬಂಧಿಸಿದಂತೆ ಕನಿಷ್ಠ 10 ವಿದ್ಯಾರ್ಥಿಗಳಿಗೆ ಒಂದರಂತೆ (10:1) ಗಣಕಯಂತ್ರಗಳಿರಬೇಕು. | |
| 50 | ಗಂಡು/ಹೆಣ್ಣು ಮಕ್ಕಳಿಗಾಗಿ ಪ್ರತ್ಯೇಕ ಶೌಚಾಲಯ | (ಶೌಚಾಲಯಗಳು ಏಕಕಾಲದಲ್ಲಿ 10 ವಿದ್ಯಾರ್ಥಿಗಳು ಉಪಯೋಗಿಸುವಂತಿರಬೇಕು) | |
| 51 | ಕುಡಿಯುವ ನೀರು | ನಳ/ಕೊಳವೆಬಾವಿ/ಇತರೆ (ವಿದ್ಯಾರ್ಥಿ ಸಂಖ್ಯೆಗನುಗುಣವಾಗಿರಬೇಕು) | |
| 52 | ಪೀಠೋಪಕರಣಗಳು ಮತ್ತು ಪಾಠೋಪಕರಣಗಳು | ಉತ್ತಮ ಗುಣಮಟ್ಟದ ಪೀಠೋಪಕರಣಗಳು ಇರಬೇಕು (ವಿದ್ಯಾರ್ಥಿ ಸಂಖ್ಯೆಗನುಗುಣವಾಗಿರಬೇಕು) | |
| 53 | ವಿದ್ಯುತ್, ಗಾಳಿ ಬೆಳಕು ಇತ್ಯಾದಿಗಳು ಇದೆಯೇ? | ಇರತಕ್ಕದ್ದು | |
| 54 | ಬೆಂಕಿ ನಂದಿಸುವ ಉಪಕರಣಗಳು ಇವೆಯೇ? | ಇರತಕ್ಕದ್ದು | |
| 55 | ಆಟದ ಮೈದಾನ ಇದೆಯೇ? | ವಿಸ್ತೀರ್ಣ ತಿಳಿಸತಕ್ಕದ್ದು | |
| 56 | **ದಿನಾಂಕ 31–03–2017 ರೊಳಗಾಗಿ ನಿಗದಿತ ಮೂಲಭೂತ ಸೌಕರ್ಯಗಳನ್ನು ಹೊಂದುವುದಾಗಿ ಸಂಸ್ಥೆ/ಟ್ರಸ್ಟ್ ಅಧಿಕೃತ ಅಧಿಕಾರಿಯು ಪ್ರಮಾಣೀಕರಿಸಿರುವ ರೂ 200–00ರ ಇ–ಸ್ಟಾಂಪ್ ಪತ್ರದಲ್ಲಿ ಮುಚ್ಚಳಿಕೆ ಪತ್ರ ನೀಡುವುದು** | | |

ದಿನಾಂಕ | ಪ್ರಾಚಾರ್ಯರ ಸಹಿ ಮತ್ತು ಮೊಹರು | ಅಧ್ಯಕ್ಷರು/ಕಾರ್ಯದರ್ಶಿ ಸಹಿ ಮತ್ತು ಮೊಹರು

## ಭಾಗ–G – ಉಪನಿರ್ದೇಶಕರ ದೃಢೀಕರಣ

**ಮೇಲ್ಕಂಡ ಕ್ರಮಸಂಖ್ಯೆ 1 ರಿಂದ 56 ರ ವರೆಗೆ ಎಲ್ಲಾ ಮಾಹಿತಿಯನ್ನು ಕೂಲಂಕಷವಾಗಿ ಪರಿಶೀಲಿಸಿ ದೃಢೀಕರಿಸಿದ್ದೇನೆ. ಈ ಕಾಲೇಜಿಗೆ ................................... ಸಾಲಿನಿಂದ ............................** ಸಾಲಿನ **ಅವಧಿಗೆ ಶೈಕ್ಷಣಿಕ ಮಾನ್ಯತೆಯನ್ನು ನವೀಕರಿಸಬಹುದಾಗಿದೆ.**

ದಿನಾಂಕಃ

ಉಪನಿರ್ದೇಶಕರು,
ಪದವಿ ಪೂರ್ವ ಶಿಕ್ಷಣ ಇಲಾಖೆ,